# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/166/2014-15 ದಿ:01-08-2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| 1.ನಾಗಮ್ಮ ಗಂಡ ಎಂ.ಹೊಸಳೆಪ್ಪ<br>ಉಪ್ಪಾರ ಹೊಸಳ್ಳಿ ಗ್ರಾಮ.<br>2.ನರಸಮ್ಮ ಗಂಡ ಯಂಕಪ್ಪ<br>ಬೂದುಗುಪ್ಪ ಗ್ರಾಮ. | | ಶಂಕ್ರಪ್ಪ ತಂದೆ ಯಂಕಪ್ಪ (ಪೋತಿ)<br>ವಾರಸು ಪತ್ನಿ., ಸಾವಿತ್ರಮ್ಮ.<br>ಗಾಂಧೀ ಗ್ರಾಮ. ಮೈಲಾಪುರ<br>ಸಿರುಗುಪ್ಪ ತಾ: |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಬೂದುಗುಪ್ಪ | 39/ಬಿ/3 | 1-00 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಬೂದುಗುಪ್ಪ ಗ್ರಾಮದ ಸ,ನಂ. 39/ಬಿ/3 ವಿ:1-00 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ನರಸಮ್ಮ ಗಂಡ ಯಂಕಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ನೋಂದಣಿ ಸಂಖ್ಯೆ:6283/2012-13 ದಿ:01-01-2013 ರ ಪ್ರಕಾರ ಮಗಳಾದ ನಾಗಮ್ಮ ಗಂಡ ಹೊಸಳೆಪ್ಪ ಇವರಿಗೆ ದಾನಪತ್ರ ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ಅದರಂತೆ ದಾನ ಪಡೆದವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಕರೂರು ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಬೂದುಗುಪ್ಪ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಶಂಕ್ರಪ್ಪ ತಂದೆ ಯಂಕಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:08-10-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಕರೂರು ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:25/2013-14 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:21-08-2015 ರಿಂದ 05-10-2015 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿಗಳು ಹಾಜರು, ಪ್ರತಿವಾದಿ ಶಂಕ್ರಪ್ಪ ಇವರು ದಿ:14-07-2014 ರಂದು ಮರಣ ಹೊಂದಿರುತ್ತಾರೆಂದು, ಪತ್ನಿಯಾದ ಸಾವಿತ್ರಮ್ಮ ಇವರು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿಗಳ ವಾದ ಪ್ರಕಾರ ಸದ್ರಿ ಜಮೀನು ತಮ್ಮ ಹೆಸರಿನಲ್ಲಿ ಪಹಣಿ ಇದ್ದು, ಸದ್ರಿ ಜಮೀನನ್ನು ತಮ್ಮ ಮಗಳಿಗೆ ದಾನವಾಗಿ ಕೊಟ್ಟಿದ್ದು, ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಅದೇರೀತಿ, ಪ್ರತಿವಾದಿಯಾದ, ಸಾವಿತ್ರಮ್ಮ ಇವರು ಹಾಲಿ ಪಟ್ಟಾದಾರರು ತಮಗೆ ಅತ್ತೆ ಅಂದರೆ ಗಂಡನ ತಾಯಿ ಆಗಿದ್ದು, ದಾವಾ ಜಮೀನಿನಲ್ಲಿ ತನ್ನ ಗಂಡನ ಭಾಗದ ಆಸ್ತಿಯನ್ನು ಕೊಡದೇ ತನ್ನ ಹೆಣ್ಣು ಮಕ್ಕಳಿಗೆ ದಾನಪತ್ರ ನೋಂದಣಿ ಮಾಡಿಸಿದ್ದು, ಸದ್ರಿ ಹಕ್ಕು ಬದಲಾವಣೆ ಮಾಡಬಾರದೆಂದು ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಪ್ರತಿವಾದಿಗಳ ವಾದ ಆಲಿಸಲಾಗಿ, ಬೂದುಗುಪ್ಪ ಗ್ರಾಮದ ಸ,ನಂ.39/ಬಿ/3 ವಿ:1-00 ಎಕ್ರೆ ಜಮೀನಿಗೆ ಸಂಭಂದಿಸಿ, ಸದ್ರಿ ಪ್ರಕರಣವು ನೋಂದಾಯಿತ ದಸ್ತಾವೇಜು ಆಗಿರುವ ಮೇರೆಗೆ, ನೋಂದಣಿ ಸಂಖ್ಯೆ:6283/2012-13 ದಿ:01-01-2013 ರ ಪ್ರಕಾರ ದಾನ ಪಡೆದವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸುತ್ತಾ, ಪ್ರತಿವಾದಿಯು ತಮ್ಮ ಹಕ್ಕಿನ ಬಗ್ಗೆ ಸ್ಥಿರೀಕರಿಸಲು ಸಿವಿಲ್ ನ್ಯಾಯಾಲಯದ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/166/2014-15** **ದಿ:01-08-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಬೂದುಗುಪ್ಪ ಗ್ರಾಮದ ಸ,ನಂ.39/ಬಿ/3 ವಿ:1-00 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ನರಸಮ್ಮ ಗಂಡ ಯಂಕಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ನೋಂದಣಿ ದಾನ ಪತ್ರ ಸಂಖ್ಯೆ:6283/2012-13 ದಿನಾಂಕ:01-01-2013 ರ ಪ್ರಕಾರ ದಾನ ಪಡೆದ **ನಾಗಮ್ಮ ಗಂಡ ಹೊಸಳೆಪ್ಪ** ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶದಿಂದ ಪ್ರತಿವಾದಿಯು ಬಾಧಿತರಾಗಿದ್ದಲ್ಲಿ, ತಮ್ಮ ಹಕ್ಕಿನ ಬಗ್ಗೆ ಸ್ಥಿರೀಕರಿಸಲು ಸಿವಿಲ್ ನ್ಯಾಯಾಲಯದ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:01-08-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ

2.ವಾದಿ-ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ